ರೇಷ್ಮೆ ಉತ್ಪಾದನೆ ಮತ್ತು ಸುಧಾರಣೆ.

1989(2564)

ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ): ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರೇಷ್ಮೆ ಉತ್ಪಾದನೆ 2000-2001ರಲ್ಲಿ ಎಷ್ಟಾಗಿದೆ; ಜಿಲ್ಲಾವಾರು ವಿವರಗಳನ್ನು ನೀಡುವುದು;

ಆ) ರೇಷ್ಮೆ ಉತ್ಪಾದನೆಯನ್ನು ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ವಿವರ ಒದಗಿಸುವುದು.

ಇ) ಅಂತರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆಯನ್ನು ಎದುರಿಸಬೇಕಾಗಿರುವುದರಿಂದ ರೇಷ್ಮೆ ಗುಣಮಟ್ಟವನ್ನು ಹೆಚ್ಚಿಸಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಎಂ.ಮಹದೇವ್(ರೇಷ್ಮೆ ಮತ್ತು ಜವಳಿ ಸಚಿವರು):

ಅ) 2000-2001ರಲ್ಲಿ ರಾಜ್ಯದ ಜಿಲ್ಲಾವಾರು ರೇಷ್ಮೆ ಉತ್ಪಾದನೆ ಕೆಳಕಂಡಂತಿದೆ.

ಕ್ರಮ ಸಂ.	ಜಿಲ್ಲೆಗಳು	ರೇಷ್ಮೆ ಉತ್ಪಾದನೆ (ಮೆ.ಟನ್)
1.	ಬೆಂಗಳೂರು (ಗ್ರಾ)	1918.22
2.	ಬೆಂಗಳೂರು (ನ)	166.52
3.	ಬಾಗಲಕೋಟೆ	10.29
4.	ಬೆಳಗಾಂ	25.38
5.	ಬಳ್ಳಾರಿ	36.21
6.	ಬೀದರ್	3.10
7.	ಬಿಜಾಪುರ	11.20
8.	ಚಾಮರಾಜನಗರ	620.54
9.	ಚಿಕ್ಕಮಗಳೂರು	4.53

10.	ಚಿತ್ರದುರ್ಗ	212.00
11.	ದಕ್ಷಿಣ ಕನ್ನಡ	4.34
12.	ದಾವಣಗೆರೆ	10.42
13.	ಧಾರವಾಡ	6.11
14.	ಗದಗ್	4.87
15.	ಗುಲ್ಬರ್ಗ	15.09
16.	ಹಾಸನ	129.34
17.	ಹಾವೇರಿ	8.55
18.	ಕೊಡಗು	3.58
19.	ಕೋಲಾರ	2855.31
20.	ಕೊಪ್ಪಳ	4.82
21.	ಮಂಡ್ಯ	804.21
22.	ಮೈಸೂರು	519.26
23.	ರಾಯಚೂರು	3.42
24.	ಶಿವಮೊಗ್ಗ	5.82
25.	ತುಮಕೂರು	752.58
26.	ಉಡುಪಿ	2.39
27.	ಉತ್ತರ ಕನ್ನಡ	8.70
28.	ಮೈಸೂರು ಬಿತ್ತನೆ ವಲಯ	53.20
	ಒಟ್ಟು	8200.00

ಆ) 1. ಉತ್ಪಾದನೆ, ಉತ್ಪಾದಕತೆ ಮತ್ತು ಗುಣಮಟ್ಟದ ಸುಧಾರಣೆಗೆ ರೇಷ್ಮೆ ಸಂಪತ್ತು ಯೋಜನೆ ಸಮಗ್ರ ರೇಷ್ಮೆ ಅಭಿವೃದ್ಧಿ ಯೋಜನೆ ರೂಪಿಸಲಾಗಿದೆ.

2. ರೇಷ್ಮೆ ಸಂಶೋಧನಾಲಯಗಳ ಹೊರತಂದಿರುವ ಹೊಸ ತಾಂತ್ರಿಕತೆಗಳನ್ನು ರೈತರಲ್ಲಿ ಅಳವಡಿಸಿ ಉತ್ಪಾದನೆ, ಉತ್ಪಾದಕತೆ ಮತ್ತು ಗುಣಮಟ್ಟವನ್ನು ಸುಧಾರಿಸುವುದು.

3. ಹೆಚ್ಚು ಇಳುವರಿ ನೀಡುವ ಹೊಸ ದ್ವಿತಳಿಗಳ ಸಾಕಣೆ ರೈತರಲ್ಲಿ ಜನಪ್ರಿಯವಾಗಿದ್ದು, ಈ ತಳಿಗಳ ಸಾಕಣೆಗೆ ರೈತರನ್ನು ಪ್ರೇರೇಪಿಸುತ್ತಿರುವುದು.

4. ಪ್ರತ್ಯೇಕ ಹುಳು ಸಾಕಣೆ ಮನೆ ನಿರ್ಮಾಣ, ಹನಿ ನೀರಾವರಿ ಪದ್ಧತಿ ಅಳವಡಿಕೆ, ಈ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ಧನ ಒದಗಿಸುವುದು.

5. ಮಲ್ಟಿ ಎಂಡ್ ಘಟಕಗಳ ಸ್ಥಾಪನೆಗೆ ಸಾಲ ಸೌಲಭ್ಯ ಮತ್ತು ಸಹಾಯಧನ ಒದಗಿಸುವುದು.

6. ಕ್ವಾಲಿಟಿ ಕ್ಲಬ್‌ಗಳ ಸ್ಥಾಪನೆ.

7. ಹೊಸ ಪ್ರದೇಶಗಳ ರೈತರಿಗೆ ಮತ್ತು ನೂಲು ಬಿಚ್ಚಣಿಕೆ ಮಾಡಲು ಮುಂದುಬರುವ ಉದ್ಯಮಶೀಲರಿಗೆ ಸಂಪ್ರದಾಯ ಪ್ರದೇಶದಲ್ಲಿ ಪ್ರಾತ್ಯಕ್ಷತಾ ತರಬೇತಿ ಒದಗಿಸುವುದು.

8. ಇಲಾಖೆಯ ತರಬೇತಿ ಶಾಲೆಗಳಲ್ಲಿ ತರಬೇತಿ ಒದಗಿಸುತ್ತಿರುವುದು.

9. ದ್ವಿತಳಿ ಗೂಡು ಮತ್ತು ರೇಷ್ಮೆ ಪ್ರೋತ್ಸಾಹಧನ ನೀಡುತ್ತಿರುವುದು.

ಇ) ಉತ್ಪಾದನೆ, ಉತ್ಪಾದಕತೆ ಮತ್ತು ಗುಣಮಟ್ಟದ ಸುಧಾರಣೆಗೆ ರೇಷ್ಮೆ ಸಂಪತ್ತು ಯೋಜನೆ ಸಮಗ್ರ ರೇಷ್ಮೆ ಅಭಿವೃದ್ಧಿ ಯೋಜನೆ ರೂಪಿಸಲಾಗಿದೆ.

ಸಂಶೋಧನಾ ಸಂಸ್ಥೆಗಳು ಅಭಿವೃದ್ಧಿಪಡಿಸಿರುವ ಹೊಸ ತಾಂತ್ರಿಕತೆಗಳ ಅಳವಡಿಕೆ ಅಧಿಕ ಇಳುವರಿ ನೀಡುವ ಹಿಪ್ಪು ನೇರಳೆ ತಳಿಗಳ ನಾಟಿ, ಹೊಸ ದ್ವಿತಳಿ ಸಂಕರಣ ತಳಿಗಳ ಸಾಕಣೆಗೆ ಪ್ರೋತ್ಸಾಹ ನೀಡುತ್ತ ಮಲ್ಟಿ ಎಂಡ್ ಘಟಕಗಳ ಸ್ಥಾಪನೆಗೆ ಪ್ರೋತ್ಸಾಹ ನೀಡಿ ಅಂತರರಾಷ್ಟ್ರೀಯ ಗುಣಮಟ್ಟದ ರೇಷ್ಮೆ ಉತ್ಪಾದಿಸಲು ಯೋಜಿಸಲಾಗಿದೆ.